ಹಿಂದೆ ಹಡಗು, ಸಣ್ಣ ದೋಣಿಗಳು ಸಂಚರಿಸುತ್ತಿದ್ದವು. ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಹತ್ಯೆಯ ಬಳಿಕ ಸುರಕ್ಷತೆ ಮತ್ತು ಇತರ ಕಾರಣಗಳಿಂದ ಆ ಸಂಚಾರವನ್ನು ನಿಲ್ಲಿಸಲಾಗಿದೆ.

ಧನುಷ್ಕೋಟಿವರೆಗೆ ಹಿಂದೆ ರೈಲ್ವೆ ಸಂಪರ್ಕವೂ ಇತ್ತು. ಅದು ಉಭಯ ರಾಷ್ಟ್ರಗಳ ನಡುವಿನ ಪ್ರಮುಖ ಸಂಪರ್ಕ ಸೇತುವೂ ಆಗಿತ್ತು. ರೈಲು ನಿಲ್ದಾಣ, ಅಂಚೆ ಕಚೇರಿ, ಅಂಗಡಿ ಮುಂಗಟ್ಟುಗಳು ಎಲ್ಲವೂ ಇದ್ದವು. ವ್ಯಾಪಾರ –ವಹಿವಾಟು ಕೇಂದ್ರದ ಜೊತೆಗೆ ಪ್ರವಾಸಿ ತಾಣವೂ ಆಗಿತ್ತು. ಉಭಯ ರಾಷ್ಟ್ರಗಳ ಸಂಪರ್ಕ ಮತ್ತು ಸರಕು ಸಾಗಣೆಗೆ ಅನುಕೂಲ ಆಗುವಂತೆ ಇಲ್ಲೊಂದು ಸೇತುವೆಯೂ ಇತ್ತು.

1964 ರಲ್ಲಿ ಅಪ್ಪಳಿಸಿದ ಭಾರಿ ಚಂಡಮಾರುತ ಇಲ್ಲಿನ ಸರ್ವಸ್ವವನ್ನೂ ನಾಶ ಮಾಡಿತು. ಪಾಂಬಂ ದ್ವೀಪದಿಂದ ಧನುಷ್ಕೋಟಿಗೆ ರೈಲಿನಲ್ಲಿ ಪ್ರಯಣಿಸುತ್ತಿದ್ದ 100 ಜನರನ್ನು ಆ ಚಂಡಮಾರುತ ಬಲಿ ತೆಗೆದುಕೊಂಡಿತು. ಹಳಿಗಳೂ ನಾಶವಾದವು. ಮನೆ, ಅಂಗಡಿ ಎಲ್ಲವೂ ನಾಮಾವಶೇಷವಾದವು.

ರಾಮಾಯಣ ಮಹಾಕಾವ್ಯದಲ್ಲಿ ಒಂದು ಉಲ್ಲೇಖವಿದೆ. ರಾವಣನನ್ನು ಸೋಲಿಸಿದ ಬಳಿಕ



ಸ್ಥಳೀಯರ ವಾಸದ ಮನೆ



ಹಳೆಯ ರೈಲು ನಿಲ್ದಾಣದ ಕುರುಹು

